# ಪ್ರಕೃತಿ ನಟನಾ ಪ್ರೀತಿ

■ ಸುಮಲತಾ ಎನ್.



ಕನ್ನಡದ ಕಿರುತೆರೆ, ಬೆಳ್ಳಿತೆರೆ ಎರಡರಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ನಟಿ ಪ್ರಕೃತಿ ಪ್ರಸಾದ್, 'ಶುಭಕೃತ್ ನಾಮ ಸಂವತ್ಸರ' ಸಿನಿಮಾದಲ್ಲಿ ನಟಿಸುತ್ತಿದ್ದು, ತಮ್ಮ ಸಿನಿಮಾ ಪ್ರೀತಿಯನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

"ಪುನೀತ್ ಅವರ ಅಭಿನಯದ 'ಮಿಲನ' ಸಿನಿಮಾದಲ್ಲಿ ಅಂಜಲಿ ಪಾತ್ರವಿದೆಯಲ್ಲಾ, ಅದು ನನಗೆ ತುಂಬಾ ಇಷ್ಟ. ಆ ಇಡೀ ಸಿನಿಮಾ ನಿಂತಿದ್ದೇ ಅವರಿಬ್ಬರ ಪಾತ್ರದ ಮೇಲೆ. ಒಬ್ಬರಿಲ್ಲದೇ ಇನ್ನೊಬ್ಬರ ಪಾತ್ರಕ್ಕೆ ಮೌಲ್ಯವೇ ಇಲ್ಲ. ಅಂಥದ್ದೊಂದು ಪಾತ್ರ ಮಾಡಬೇಕು" ಎಂದು ಪಾತ್ರದ ಕುರಿತು ತಮ್ಮೊಳಗಿನ ಅಭಿಲಾಷೆಯನ್ನು ತೆರೆದಿಟ್ಟರು ನಟಿ ಪ್ರಕೃತಿ ಪ್ರಸಾದ್.

ಬೆಂಗಳೂರಿನ ಹುಡುಗಿ ಪ್ರಕೃತಿ ಅವರದ್ದು ಕನ್ನಡ ಕಿರುತೆರೆಯಲ್ಲಿ ಪರಿಚಿತ ಮುಖ. 'ಸೌಭಾಗ್ಯವತಿ'ಯಿಂದ ಹೆಜ್ಜೆಯಿಟ್ಟು ಹಲವು ಧಾರಾವಾಹಿಗಳಿಗೆ ಬಣ್ಣ ಹಚ್ಚಿದ್ದರು. ನಟನೆಯನ್ನೇ ವೃತ್ತಿಬದುಕಾಗಿ ಸ್ವೀಕರಿಸಿ ಕಿರುತೆರೆ, ಹಿರಿತೆರೆಗಳೆರಡರಲ್ಲೂ ಸಕ್ರಿಯರಾಗಿದ್ದಾರೆ.

ಪ್ರಕೃತಿ ಅವರು ಸಿನಿಮಾರಂಗಕ್ಕೆ ಪರಿಚಿತರಾದದ್ದು 'ರೋಣ' ಸಿನಿಮಾ ಮೂಲಕ. ಇದೀಗ 'ಶುಭಕೃತ್ ನಾಮ ಸಂವತ್ಸರ' ಸಿನಿಮಾದಲ್ಲಿ ಅಭಿನಯಿಸುತ್ತಿದ್ದು, ಹಲವು ಕಲಾವಿದರೊಂದಿಗೆ ಬೆರೆಯುತ್ತಿರುವ ಪುಳಕದಲ್ಲಿದ್ದಾರೆ. ಕನ್ನಡ– ತೆಲುಗು ಭಾಷೆಗಳಲ್ಲಿ ಏಕಕಾಲಕ್ಕೆ ಚಿತ್ರೀಕರಣ ನಡೆಯುತ್ತಿದೆ. ಇದೇ ಉತ್ಸಾಹದಲ್ಲಿ ಈ ಸಿನಿಮಾ ಹಾಗೂ ತಮ್ಮ ಪಾತ್ರದ ಕುರಿತು ಮಾತು ಹಂಚಿಕೊಂಡಿದ್ದಾರೆ.

'ಈ ಕಥೆಯಲ್ಲಿ ಪಾತ್ರಗಳೆಲ್ಲ ಒಟ್ಟಿಗೆ ಪಯಣಿಸುತ್ತವೆ. ಇಲ್ಲಿ ಯಾರಿಗೆ ಯಾರೂ ಗೊತ್ತಿರುವುದಿಲ್ಲ, ಸಂಬಂಧವಿರುವುದಿಲ್ಲ. ಗೊತ್ತಿಲ್ಲದೇ ಭೇಟಿ ಆಗಿ ಒಬ್ಬರಿಂದ ಒಬ್ಬರಿಗೆ ಹೇಗೆ ಜೀವನ ಕನೆಕ್ಟ್ ಆಗುತ್ತದೆ, ಹೇಗೆ ಒಂದಕ್ಕೊಂದು ಪರಿಣಾಮ ಬೀರುತ್ತಾ ಸಾಗುತ್ತದೆ ಎನ್ನುವ ಪರಿಕಲ್ಪನೆ ಈ ಸಿನಿಮಾದ ಜೀವಾಳ. ಈ ಕಥೆಯಲ್ಲಿ ಮನರಂಜನೆಯೊಂದಿಗೆ ನಮ್ಮ ಸಂಸ್ಕೃತಿಯನ್ನು ಸೆಲಬ್ರೇಟ್ ಮಾಡಲಾಗಿದೆ. ಇದು ಜನರಿಗೆ ಕನೆಕ್ಟ್ ಆಗುವ ನಂಬಿಕೆಯಿದೆ' ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಸಿನಿಮಾಲೋಕ ಹೊಸತೆನಿಸಿದರೂ ಧಾರಾವಾಹಿಗಳಲ್ಲಿನ ನಟನೆಯ ಅನುಭವ ಅವರೊಳಗೆ ಆತ್ಮವಿಶ್ವಾಸ ತುಂಬಿದೆ. ನಟಿಸಬೇಕೆಂಬ ಆಸೆ ಹುಮ್ಮಸ್ಸು ತಂದುಕೊಟ್ಟಿದೆ.

"ಹತ್ತನೇ ತರಗತಿ ಮುಗಿದು ಬೇಸಿಗೆಯ ರಜೆಯಲ್ಲಿ ನಮ್ಮ ಮನೆ ಬಳಿ ಇದ್ದ 'ಲೈಮ್‌ಲೈಟ್ ಆ್ಯಕ್ಟಿಂಗ್ ಅಕಾಡೆಮಿ'ಗೆ ಸೇರಿದೆ. ಅಲ್ಲಿ ನನ್ನನ್ನು ಆಡಿಷನ್‌ಗಳಿಗೆ ಕಳಿಸುತ್ತಿದ್ದರು. ಹಲವು ಆಡಿಷನ್‌ಗಳನ್ನು ಎದುರಿಸುತ್ತಲೇ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. 'ಸೌಭಾಗ್ಯವತಿ' ಧಾರಾವಾಹಿಯಲ್ಲಿ ಕಾಣಿಸಿಕೊಂಡ ನಂತರ ಮತ್ತಷ್ಟು ಧಾರಾವಾಹಿಗಳಲ್ಲಿ ಅಭಿನಯಿಸುವ ಅವಕಾಶಗಳು ದೊರೆತವು. ಇಲ್ಲಿ ಮೊದಲ ಹೆಜ್ಜೆ ಇಡುವುದೇ ಕಷ್ಟ. ಒಂದು ಉತ್ತಮ ಅವಕಾಶ ಸಿಕ್ಕಿದ ಮೇಲೆ ಸುಲಭವೆನಿಸುತ್ತದೆ" ಎಂದು ತಮ್ಮ ಅನುಭವ ಬಿಡಿಸಿಡುವ ಅವರು, ಕಿರುತೆರೆ ಬಗ್ಗೆ ಧನ್ಯತಾಭಾವ ವ್ಯಕ್ತಪಡಿಸುತ್ತಾರೆ.

'ಬೆಳ್ಳಿತೆರೆಯೊಂದಿಗೆ ಕಿರುತೆರೆಯಲ್ಲಿಯೂ ಮುಂದುವರೆದಿದ್ದೇನೆ. ನಟನೆ ಬಗ್ಗೆ ಏನೇ ಕಲಿತಿದ್ದರೂ ಅದು ಕಿರುತೆರೆಯಿಂದಲೇ. ಕಿರುತೆರೆಯಲ್ಲಿ ಸ್ಥಿರತೆ ಇರುತ್ತದೆ. ಒಂದು ಧಾರಾವಾಹಿ ಸಿಕ್ಕಿದರೆ ಕನಿಷ್ಠ ಒಂದು ವರ್ಷ ಇರುತ್ತದೆ. ಆ ಒಂದು ವರ್ಷ ಕೆಲಸ ಸಿಕ್ಕುತ್ತದೆ. ಆರ್ಥಿಕವಾಗಿ ಭದ್ರತೆ ಇರುತ್ತದೆ. ಸಿನಿಮಾರಂಗದಲ್ಲಿ ಹೀಗಿಲ್ಲ. ಸಿನಿಮಾ ಹೇಗೆ ಮೂಡಿಬರುತ್ತದೆ, ಥಿಯೇಟರ್‌ಗೆ ಹೋಗುತ್ತೋ ಹೋಗಲ್ಲವೋ ಗೊತ್ತಿರುವುದಿಲ್ಲ. ಅಭದ್ರತೆ ಇರುತ್ತದೆ. ಸವಾಲಾಗಿ ಸ್ವೀಕರಿಸಬೇಕಷ್ಟೆ' ಎಂದು ವಾಸ್ತವವನ್ನು ತೆರೆದಿಡುತ್ತಲೇ, 'ಧಾರಾವಾಹಿಗಳಿಗಿಂತ ಸಿನಿಮಾರಂಗದಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುವ ಅವಕಾಶ ಪ್ಲಸ್‌ಪಾಯಿಂಟ್' ಎನ್ನುತ್ತಾರೆ.

'ಧಾರಾವಾಹಿಯಲ್ಲಿ ಒಂದೇ ಪಾತ್ರ ಹಲವು ದಿನಗಳವರೆಗೆ, ಕೆಲವೊಮ್ಮೆ ವರ್ಷಗಳವರೆಗೆ ಇರುತ್ತದೆ. ಸಿನಿಮಾದಲ್ಲಿ ಹಾಗಲ್ಲ. ಒಂದು ಸಿನಿಮಾದಿಂದ ಮತ್ತೊಂದು ಸಿನಿಮಾದ ಪಾತ್ರ ಬೇರೆಯಾಗಿರುತ್ತದೆ. ಹೊಸ ಹೊಸ ಸೆಟ್‌ಗಳಿಗೆ ಹೋಗುತ್ತೇವೆ. ಹೊಸ ಪರಿಚಯ, ಹೊಸ ಕಲಿಕೆ ಸಾಧ್ಯ. ನಮ್ಮನ್ನು ನಾವು ತಿದ್ದಿಕೊಳ್ಳಲು ಅವಕಾಶವಾಗುತ್ತದೆ' ಎನ್ನುತ್ತಾರೆ.

"ಪಾತ್ರ ಸಣ್ಣದಿರಲಿ, ದೊಡ್ಡದಿರಲಿ, ಸಿನಿಮಾಗೆ ಅದು ಕೊಡುಗೆಯಾಗಿರಬೇಕು. ಬರೀ ಹಾಡುಗಳಲ್ಲಿ ನೃತ್ಯಗಳಲ್ಲಿ ಕಾಣಿಸಿಕೊಳ್ಳುವುದು ನನಗಿಷ್ಟ ಇಲ್ಲ. 'ಈ ಪಾತ್ರವಿಲ್ಲದೆ ಕಥೆ ಅಪರಿಪೂರ್ಣ' ಎನ್ನಿಸುವ ರೀತಿಯ ಪಾತ್ರ ಆಗಿರಬೇಕು. 'ಮಿಲನ'ದ ಅಂಜಲಿ ಪಾತ್ರದ ನಂತರ ಈಚೆಗೆ 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾದಲ್ಲಿ ರುಕ್ಮಿಣಿ ವಸಂತ್ ಅವರ ಪಾತ್ರ ಹಾಗೆ ಕಂಡಿತ್ತು" ಎಂದು ತಮ್ಮದೇ ರೀತಿ ವಿಶ್ಲೇಷಿಸಿದ್ದಾರೆ.

ತಮಿಳು ಸಿನಿಮಾವೊಂದರ ಚಿತ್ರೀಕರಣ ಮುಗಿಸಿರುವ ಪ್ರಕೃತಿ, 'ಶುಭಕೃತ್ ನಾಮ ಸಂವತ್ಸರ' ಸಿನಿಮಾದ ಜೊತೆಜೊತೆಗೆ 'ಭಾಗ್ಯವಂತರು' ಧಾರಾವಾಹಿಯಲ್ಲಿಯೂ ತೊಡಗಿಸಿಕೊಳ್ಳುತ್ತಿದ್ದಾರೆ. ■